# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 180
2. ಮಾನ್ಯ ಸದಸ್ಯರ ಹೆಸರು : ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 18.08.2026
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

*****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆ ಔರಾದ್ ಪಟ್ಟಣದ ಹೃದಯ ಭಾಗದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಎರಡು ಎಕರೆ ಜಮೀನು ಪಡೆದು ಕೈಗಾರಿಕಾ ಘಟಕ ಸ್ಥಾಪಿಸುವುದಾಗಿ ತಿಳಿಸಿ ಸದರಿ ಸಾಯಿ ಜಿನ್ನಿಂಗ್ ಮಿಲ್ ರವರು ಜಮೀನನ್ನು ನಿವೇಶನಗಳನ್ನಾಗಿ ಮಾಡಿ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | -ಹೌದು- |
| (ಆ) | ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; ಸರ್ಕಾರದಿಂದ ಜಮೀನು ಮುಟ್ಟುಗೋಲು ಆದೇಶವಿದ್ದರೂ, ಇನ್ನೂ ಮುಟ್ಟುಗೋಲು ಹಾಕಿಕೊಳ್ಳದಿರಲು ಕಾರಣಗಳೇನು; (ಮಾಹಿತಿ ನೀಡುವುದು) | ಔರಾದ ಸಮಿತಿಯ ಪ್ರಾಂಗಣದಲ್ಲಿ ಜಿನ್ನಿಂಗ್ ಮಿಲ್ ನಿರ್ಮಾಣದ ಸಲುವಾಗಿ 02 ಎಕರೆ ಜಮೀನನ್ನು ಶ್ರೀ ಚಂದ್ರಕಾಂತ ಪಾಟೀಲ ಕೊಳ್ಳುರ ಇವರಿಗೆ ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಲು ದಿನಾಂಕ:09-04-1992 ರಂದು ಮಂಜೂರಾತಿ ನೀಡಲಾಗಿರುತ್ತದೆ. ಹಂಚಿಕೆ ಪಡೆದವರು ಸದರಿ ಜಾಗವನ್ನು ಹಂಚಿಕೆ ಪಡೆದ ಉದ್ದೇಶಕ್ಕೆ ಬಳಸದೇ, ಸದರಿ ಜಾಗದಲ್ಲಿ ನಿವೇಶನಗಳನ್ನು ರೂಪಿಸಿ ಬೇರೆಯವರಿಗೆ ಮಾರಾಟ ಮಾಡಿರುವ ಮೂಲಕ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004 ರ ನಿಯಮ 10 ರಲ್ಲಿನ ಷರತ್ತುಗಳನ್ನು ಉಲ್ಲಂಘನೆ ಮಾಡಿರುತ್ತಾರೆ.<br><br>ಆದ್ದರಿಂದ, ಮೆ:ಸಾಯಿ ಜಿನ್ನಿಂಗ್ ಮಿಲ್‌ರವರಿಗೆ ಹಂಚಿಕೆ ಮಾಡಲಾದ ಜಮೀನನ್ನು ಕೇಂದ್ರ ಕಚೇರಿಯ ಪತ್ರ ದಿನಾಂಕ:02-09-2025 ಮತ್ತು ದಿನಾಂಕ:30-05-2026 ರಲ್ಲಿ ಕೂಡಲೇ ಮುಟ್ಟುಗೋಲು ಹಾಕಿಕೊಂಡು ವರದಿ ಸಲ್ಲಿಸುವಂತೆ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಔರಾದ ಇವರಿಗೆ ಸೂಚಿಸಲಾಗಿರುತ್ತದೆ.<br><br>ಅದರಂತೆ, ಔರಾದ ಸಮಿತಿಯು ದಿ:ನಾಂಕ22-06-2026 ರಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004ನ್ನು ಉಲ್ಲಂಘನೆ ಮಾಡಿರುವುದರಿಂದ 02 ಎಕರೆ ಜಮೀನನ್ನು ಮತ್ತು ಅದರಲ್ಲಿನ ಕಟ್ಟಡಗಳ ಸಹಿತ ಸಮಿತಿಗೆ ಹಸ್ತಾಂತರಿಸಲು ಜಾರಿ ಮಾಡಿರುವ ತಿಳುವಳಿಕೆ ಪತ್ರದ ವಿರುದ್ಧ ಹಂಚಿಕೆ ಪಡೆದವರು ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠ, ಕಲಬುರಗಿ ಇಲ್ಲಿ ರಿಟ್ ಪಿಟಿಷನ್ ಸಂಖ್ಯೆ:202814/2026ನ್ನು ದಾಖಲು ಮಾಡಿದ್ದು, |

2....

| | | |
|---|---|---|
| | | ಮಾನ್ಯ ನ್ಯಾಯಾಲಯವು ದಿನಾಂಕ:20-07-2026 ರಂದು ಸಮಿತಿಯು ಹೊರಡಿಸಿರುವ ತಿಳುವಳಿಕೆ ಪತ್ರಕ್ಕೆ ಮಧ್ಯಂತರ ತಡೆಯಾಜ್ಞೆ ಹೊರಡಿಸಿ ಪ್ರಕರಣದ ವಿಚಾರಣೆಯನ್ನು ದಿನಾಂಕ:17-08-2026ಕ್ಕೆ ಮುಂದೂಡಿರುತ್ತದೆ. |
| **(ಇ)** | ಆದೇಶಗಳನ್ನು ಉಲ್ಲಂಘನೆ ಮಾಡಿರುವುದಕ್ಕೆ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | |

**ಸಂಖ್ಯೆ: ಸಿಒ 273 ಎಂಆರ್‌ಇ 2026**

**(ಡಿ.ಕೆ. ಶಿವಕುಮಾರ್)**
ಮುಖ್ಯಮಂತ್ರಿಗಳು